ನನ್ನಂಥ ಎಷ್ಟೋ ಜನರ ಬದುಕಿಗೂ ಅವರ ಮಾತು ಪ್ರೇರಣೆಯಾಗಬಹುದಲ್ಲವೇ ಅನಿಸಿತು' ಎಂದು ಪೂಜಾ ತಮ್ಮ ಅನುಭವದ ಮೂಲಕವೇ ಹೊಸದೊಂದು ಪ್ರಯತ್ನಕ್ಕೆ ಸ್ಫೂರ್ತಿ ಸಿಕ್ಕಿದ್ದನ್ನು ವಿವರಿಸಿದರು.

'ಅಮ್ಮ ನೀವೊಂದು ಮಾಸ್ಟರ್ ಕ್ಲಾಸ್ ಮಾಡಿಕೊಡಿ. ನಾನೇ ಅದನ್ನು ನಿರ್ದೇಶಿಸುತ್ತೇನೆ' ಎಂದು ಕೇಳಿಕೊಂಡಾಗ ಕಾಮಿನಿ ರಾವ್ ಮೊದಲಿಗೆ ಒಪ್ಪಿರಲಿಲ್ಲ. 'ನಾನು ವೈದ್ಯೆ. ನನ್ನ ಮಾತನ್ನು ಯಾರು ಕೇಳುತ್ತಾರೆ?' ಎಂದು ನಕ್ಕಿದ್ದರು. ಆದರೆ ನಂತರ ಪೂಜಾ ಅವರ ಒತ್ತಾಯಕ್ಕೆ ಮಣಿದು ಮಾತನಾಡಲು ಒಪ್ಪಿಕೊಂಡರು. ಪೂಜಾ ಪೂರ್ವಿ ಪ್ರೊಡಕ್ಷನ್ ಎಂಬ ನಿರ್ಮಾಣ ಸಂಸ್ಥೆ ಆರಂಭಿಸಿದರು. ಯೂಟ್ಯೂಬ್‌ನಲ್ಲಿ ಕಾಮಿನಿ ರಾವ್ ಅವರ ಹೆಸರಿನಲ್ಲಿಯೇ ಒಂದು ಯೂಟ್ಯೂಬ್ ಚಾನೆಲ್ ಪ್ರಾರಂಭಿಸಿ, ಬೇರೆ ಬೇರೆ ಕ್ಷೇತ್ರದ ಜನರ ಜೊತೆಯಲ್ಲಿ ಕಾಮಿನಿ ರಾವ್ ಸಂದರ್ಶನ ಮಾಡುವ ಸರಣಿ ವಿಡಿಯೊಗಳನ್ನು ಆಯೋಜನೆ ಮಾಡಿದರು. ಈ ಸರಣಿಯಲ್ಲಿ ಗುರುರಾಜ್ ಕರಜಗಿ, ಗೋಪಾಲ್ ಬಿ. ಹೊಸೂರು, ವಾಸಂತಿ ಹರಿಪ್ರಕಾಶ್ ಸೇರಿದಂತೆ ಹಲವು ಸಾಧಕರ ಬದುಕಿನ ಕುರಿತು ತಿಳಿಸಿಕೊಡುವ ಮೂಲಕ ಸಾಮಾನ್ಯ ಜನರಲ್ಲಿ ಸಾಧನೆಗೆ ಪ್ರೇರಣೆ ಒದಗಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಈ ಪ್ರಯತ್ನಕ್ಕೆ ಜನರಿಂದ ಬಂದಿರುವ ಸ್ಪಂದನ ಪೂಜಾ ಮತ್ತು ಕಾಮಿನಿ ಇಬ್ಬರಲ್ಲಿಯೂ ವಿನೀತಭಾವ ಹುಟ್ಟಿಸಿದೆ. ಇಲ್ಲಿ ಬಿಡುಗಡೆಯಾಗುವ ವಿಡಿಯೊಗಳನ್ನು ಹತ್ತಾರು ಸಾವಿರ ಜನರು ವೀಕ್ಷಿಸುತ್ತಿದ್ದಾರೆ. ವಿಡಿಯೊಗಳನ್ನು ನೋಡಿ ಸಾವಿರಾರು ಜನರು ಕಾಮೆಂಟ್, ಇ–ಮೇಲ್, ಪತ್ರಗಳ ಮೂಲಕ ಪ್ರತಿಕ್ರಿಯಿಸಿದ್ದಾರಂತೆ.

ಹರಟೆಕಟ್ಟೆಯೂ ಇದೆ

ಕಾಮಿನಿ ರಾವ್ ಮಾಸ್ಟರ್ ಕ್ಲಾಸ್ ನಡೆಯುವುದು ಇಂಗ್ಲಿಷ್‌ನಲ್ಲಿ. ಆದರೆ ಕನ್ನಡದಲ್ಲಿಯೂ ಏನಾದರೂ ಮಾಡಬೇಕು ಎಂಬ ಉದ್ದೇಶದಿಂದ 'ಪೂರ್ವಿರಾಗದ ಹರಟೆ ಅಂಗಳ'ವನ್ನು ಆರಂಭಿಸಿದ್ದಾರೆ. ಇದಕ್ಕೂ ಒಂದು ಹಿನ್ನೆಲೆಯಿದೆ. ಬಡ ಮಕ್ಕಳಿಗೆ ಶಿಕ್ಷಣ ಕೊಡುವ ಉದ್ದೇಶದಿಂದ ದೇಣಿಗೆ ಸಂಗ್ರಹಕ್ಕಾಗಿ ಕೆಲವು ವರ್ಷಗಳಿಂದ 'ಕಾಮಿನಿ ಕೇರ್ ಪ್ರತಿಷ್ಠಾನ'ದ ವತಿಯಿಂದ 'ಪೂರ್ವಿ ರಾಗ' ಎಂಬ ಸಂಗೀತ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. ಅದರಲ್ಲಿ ಜೋಗಿ ಸುನೀತಾ, ಬಿ.ಆರ್. ಛಾಯಾ, ಮಂಜುಳಾ ಗುರುರಾಜ್ ಅವರೆಲ್ಲರೂ ಭಾಗವಹಿಸಿದ್ದಾರೆ. ಅದೇ ಕಾರ್ಯಕ್ರಮದ ಇನ್ನೊಂದು ರೂಪವಾಗಿ 'ಪೂರ್ವಿರಾಗದ ಹರಟೆ ಅಂಗಳ' ಆರಂಭವಾದದ್ದು. ಇದನ್ನು ಅಪರ್ಣಾ ವಸ್ತಾರೆ ನಡೆಸಿಕೊಡುತ್ತಾರೆ. ಜೋಗಿ ಸುನೀತಾ ಒಂದು ಹಾಡಿನ ಸೊಲ್ಲು ಹಾಡುತ್ತಾರೆ. ಕಾಮಿನಿ ರಾವ್ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ. ಹಾಡು, ಅರ್ಥ ಮತ್ತು ಅನುಭವಗಳ ಅಪರೂಪದ ಮಿಶ್ರಣ ಈ ಕಾರ್ಯಕ್ರಮ. ಈ ಕಾರ್ಯಕ್ರಮದ ಮೊದಲ ಕಂತಿನಲ್ಲಿ ಕನ್ನಡ ರಾಜ್ಯೋತ್ಸವದ ಬಗ್ಗೆ ಚರ್ಚಿಸಲಾಗಿತ್ತು. ಎರಡನೇ ಕಂತಿನಲ್ಲಿ ರೈತರ ಸಂಕಷ್ಟದ ಬಗ್ಗೆ ಚರ್ಚಿಸಲಾಗಿದೆ.

ಮನುಷ್ಯ ಮನುಷ್ಯರ ನಡುವಿನ ಗೋಡೆಗಳನ್ನು ಕೆಡವಿ ನಿರಾಳಭಾವ ಹುಟ್ಟಿಸುವ ಕೆಲಸವನ್ನು ಈ ಹರಟೆಕಟ್ಟೆ ಮಾಡುತ್ತದೆ ಎಂಬುದು ಅವರ ನಂಬಿಕೆ.

## ಕಿರುಚಿತ್ರಗಳ ತಯಾರಿಕೆ

ಪೂರ್ವಿ ಪ್ರೊಡಕ್ಷನ್ ಕಾಮಿನಿ ರಾವ್ ಅವರ ಬೆಂಬಲದೊಂದಿಗೆ, ಪೂಜಾ ಅವರ ಚೈತನ್ಯದೊಂದಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲೇ ಇದೆ. ಕೌಟುಂಬಿಕ ಸಂಬಂಧಗಳು, ಸಾಮಾಜಿಕ ಮೌಲ್ಯಗಳು, ಶಿಕ್ಷಣದ ಮಹತ್ವ, ವ್ಯಕ್ತಿತ್ವ ವಿಕಸನ – ಹೀಗೆ ಹಲವು ಪರಿಕಲ್ಪನೆಗಳನ್ನು ಇಟ್ಟುಕೊಂಡು ಸಮಾಜಕ್ಕೊಂದು ಒಳ್ಳೆಯ ಸಂದೇಶ ಕೊಡುವ, ಜನರು ತಮ್ಮ ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಮಾರ್ಗದರ್ಶನ ನೀಡುವಂಥ ಕಿರುಚಿತ್ರಗಳನ್ನು ಮಾಡುವ ಉದ್ದೇಶ ಈ ನಿರ್ಮಾಣ ಸಂಸ್ಥೆಗಿದೆ.

ಈ ಕಿರುಚಿತ್ರಗಳ ನಿರ್ಮಾಣ ಮತ್ತು ನಿರ್ದೇಶನದ ಹೊಣೆಯನ್ನು ಪೂಜಾ ಅವರೇ ವಹಿಸಿಕೊಂಡಿದ್ದಾರೆ. ಪೂಜಾ ಅವರಿಗೆ ಛಾಯಾಗ್ರಹಣದಲ್ಲಿ ಆಸಕ್ತಿ ಇದೆ. ಹವ್ಯಾಸದ ಕಾರಣಕ್ಕಾಗಿಯೇ ವಿಡಿಯೊಗ್ರಫಿ ತರಬೇತಿ ಪಡೆದುಕೊಂಡಿದ್ದು ಈಗ ಉಪಯೋಗಕ್ಕೆ ಬರುತ್ತಿದೆ. ಬರೀ ತಾವಷ್ಟೇ ಇದರಲ್ಲಿ ತೊಡಗಿಕೊಳ್ಳಬೇಕು ಎಂಬ ಉದ್ದೇಶ ಅವರಿಗಿಲ್ಲ. ಬದಲಿಗೆ ತಮ್ಮ ಸಂಸ್ಥೆ ಹತ್ತು ಹಲವು ಹೊಸ ಪ್ರತಿಭೆಗಳಿಗೆ ಮೆಟ್ಟಿಲಾಗಬೇಕು ಎಂಬ ಹಂಬಲವೂ ಇದೆ.

'ನಿಜವಾಗಲೂ ಸಾಧನೆ ಮಾಡುವ ಹಂಬಲ ಮತ್ತು ಕಷ್ಟಪಟ್ಟು ದುಡಿಯುವ ಛಲ ಇದ್ದವರಿಗೆ ನಾವು ಅವಕಾಶ ಕೊಡುತ್ತೇವೆ. ದೊಡ್ಡ ದೊಡ್ಡ ಸ್ಟಾರ್‌ಗಳ ಕಾಲ್‌ಶೀಟ್ ಇದೆ, ಸಿನಿಮಾ ಮಾಡಿಕೊಡುತ್ತೇವೆ ಎಂದು ಬರುವವರಿಗೆಲ್ಲ ಇಲ್ಲಿ ಅವಕಾಶವಿಲ್ಲ. ಸ್ಟಾರ್‌ಗಳಿಗೆ ಸಿನಿಮಾ ಮಾಡಿ ಲಾಭ ಮಾಡಿಕೊಳ್ಳುವುದು ನಮ್ಮ ಉದ್ದೇಶವೇ ಅಲ್ಲ. ಸಾಮಾಜಿಕ ಜಾಗೃತಿ ಮೂಡಿಸುವಂಥ ಸಿನಿಮಾ ಮತ್ತು ಕಿರುಚಿತ್ರಗಳನ್ನು ಮಾಡುತ್ತೇವೆ. ಅವುಗಳಲ್ಲಿ ಕೆಲವನ್ನು ಸರ್ಕಾರಕ್ಕೂ ನೀಡಿ, ರಾಜ್ಯದಾದ್ಯಂತ ಪ್ರದರ್ಶಿಸುವಂತೆ ಕೇಳಿಕೊಳ್ಳುವ ಉದ್ದೇಶವೂ ಇದೆ. ಹಾಗಂತ ಸರ್ಕಾರದಿಂದಲೂ ಹಣ ಪಡೆದುಕೊಳ್ಳುವುದಿಲ್ಲ. ನಮ್ಮ ಪ್ರಯತ್ನ ಹೆಚ್ಚಿನ ಜನರಿಗೆ ತಲುಪಬೇಕು ಎಂಬುದಷ್ಟೇ ನಮ್ಮ ಉದ್ದೇಶ' ಎನ್ನುತ್ತಾರೆ ಪೂಜಾ.

ಈಗಾಗಲೇ ಹಲವರು ಭಿನ್ನ ಕಥೆಯೊಂದಿಗೆ ಅವರನ್ನು ಸಂಪರ್ಕಿಸಿಯೂ ಇದ್ದಾರಂತೆ. ಒಳ್ಳೆಯ ಕಥೆ ಸಿಕ್ಕರೆ ಪೂರ್ಣಪ್ರಮಾಣ ಸಿನಿಮಾ ಮಾಡಲೂ ಅವರು ಸಿದ್ಧರಿದ್ದಾರೆ.

ಈಗಾಗಲೇ ನುರಿತ ವೈದ್ಯೆಯಾಗಿಯಷ್ಟೇ ಅಲ್ಲದೆ, ಸಮಾಜಸೇವೆಯ ಮೂಲಕವೂ ಪ್ರಸಿದ್ಧಿ ಗಳಿಸಿಕೊಂಡಿರುವ ಡಾ. ಕಾಮಿನಿ ರಾವ್ ಅವರ ಈ ಹೊಸ ಕನಸು ಹಲವು ರಂಗುಗಳೊಂದಿಗೆ ಇನ್ನಷ್ಟು ವಿಸ್ತಾರವಾಗಿ ಅರಳುವ ಎಲ್ಲ ಸಾಧ್ಯತೆಗಳೂ ಇವೆ.

ಪ್ರತಿಕ್ರಿಯಿಸಿ: feedback@sudha.co.in

## 'ಸಮಾಜಕ್ಕೆ ಪ್ರಯೋಜನವಾಗುವ ಕೆಲಸವಿದು'

ನಾನು ಮೊದಲು ಉದಯ ಟೀವಿಯಲ್ಲಿ ಬಂಜೆತನದ ಬಗ್ಗೆ ನಿರಂತರವಾಗಿ ಮಾಹಿತಿ ಕೊಡುತ್ತಿದ್ದೆ. ಆದರೆ ಆ ಕಾರ್ಯಕ್ರಮ ಬರೀ ವೈದ್ಯಕೀಯ ಸಂಗತಿಗಳಿಗೆ ಸೀಮಿತವಾಗಿತ್ತು. ಸಾಮಾಜಿಕ ವಿಷಯಗಳನ್ನು ಅಲ್ಲಿ ಚರ್ಚಿಸುತ್ತಿರಲಿಲ್ಲ.

ಕೋವಿಡ್ ಸಮಯದಲ್ಲಿ ಸಾಕಷ್ಟು ಜನರಿಗೆ ತೊಂದರೆಯಾಯ್ತು. ಹಲವರು ಕೆಲಸ ಕಳೆದುಕೊಂಡರು. ಎಲ್ಲರೂ ಮನೆಯಲ್ಲಿಯೇ ಕೂಡುವಂತಾಯ್ತು. ಎಲ್ಲರ ಮನಸ್ಸೂ ಖಿನ್ನತೆಗೆ ಒಳಗಾಗುತ್ತಿತ್ತು. ನನ್ನ ಸೊಸೆ ಪೂಜಾ ಇಂಥದೇ ಮನಸ್ಥಿತಿಯಲ್ಲಿ ನನ್ನೆದುರು ಬಂದಾಗ ನಾನು ಅವಳಿಗೆ ತಿಳಿಹೇಳಿದೆ. ಇದನ್ನು ದೇವರು ನಮಗೆ ನೀಡಿದ ಬ್ರೇಕ್ ಎಂದು ಯಾಕೆ ಅಂದುಕೊಳ್ಳಬಾರದು ಎಂದು ಕೇಳಿದೆ. ಅವಳಿಗೂ ನಿಜ ಅನಿಸಿತು. ಇದನ್ನೇ ಇನ್ನೊಂದಿಷ್ಟು ಜನರಿಗೆ ತಿಳಿಸುವ ಉದ್ದೇಶದಿಂದ ನಾವು ಮಾಸ್ಟರ್ ಕ್ಲಾಸ್ ಆರಂಭಿಸಿದೆವು. ಆದರೆ ಬಿಸಲೆರಿ ಬಾಟಲ್ ಅಂದ ತಕ್ಷಣ ಮಿನರಲ್ ವಾಟರ್ ಅಂತಲೇ ಜನರಿಗೆ ಹೇಗೆ ಭಾವನೆಯಾಗುತ್ತದೆಯೋ ಹಾಗೆಯೇ ಕಾಮಿನಿ ಅಂದಾಕ್ಷಣ ಐವಿಎಸ್ ಎಂದು ಜನರು ಭಾವಿಸುತ್ತಾರೆ. ಈಗಲೂ ಹಾಗೆಯೇ ನನ್ನ ಮಾಸ್ಟರ್ ಕ್ಲಾಸ್ ಅಂದಾಕ್ಷಣ ವೈದ್ಯಕೀಯ ವಿದ್ಯಾರ್ಥಿಗಳೆಲ್ಲ ಚಂದಾದಾರರಾಗಲು ಪ್ರಾರಂಭಿಸಿದರು. ಈ ಮುದಿ ವಯಸ್ಸಿನಲ್ಲಿ ಕಾಮಿನಿ ಏನು ಮಾತಾಡುತ್ತಾರೆ ಎಂದು ಜನರು ನಿರ್ಲಕ್ಷ್ಯ ವಹಿಸುತ್ತಾರೋ ಎಂಬ ಅಂಜಿಕೆ ನನಗೂ ಇತ್ತು. ಆದರೆ ಯಾವಾಗ ಮೊದಲನೇ ಎಪಿಸೋಡ್ ಪ್ರಸಾರವಾಯ್ತೋ, ಎಲ್ಲವೂ ಬದಲಾಯ್ತು. ಸಾಕಷ್ಟು ಜನರು ಇದನ್ನು ಖುಷಿಯಿಂದ ಸ್ವೀಕರಿಸಿದರು. ನನ್ನನ್ನು ಜನರು ಆದರದಿಂದ ಸ್ವೀಕರಿಸಿದರು. ಮತ್ತೆ ನಾವು ಹಿಂತಿರುಗಿ ನೋಡಲೇ ಇಲ್ಲ.

ಪೂರ್ವಿ ಪ್ರೊಡಕ್ಷನ್ ಸಂಸ್ಥೆಯ ಎಲ್ಲ ಯೋಜನೆಗಳ ಹಿಂದೆ ನನ್ನ ಸೊಸೆ ಪೂಜಾ ಇದ್ದಾಳೆ. ಅವಳಿಗೆ ನಾನು ಬೆಂಬಲವಾಗಿ ನಿಂತಿದ್ದೇನಷ್ಟೆ. ನಾವು ಏನೇ ಮಾಡಿದರೂ ಅದರಿಂದ ಸಮಾಜಕ್ಕೆ ಒಳ್ಳೆಯದಾಗಬೇಕು ಎಂಬುದು ನನ್ನ ಉದ್ದೇಶ. ನಾವು ಎಷ್ಟೇ ಸಂಪಾದನೆ ಮಾಡಿದರೂ ನಮ್ಮ ನಂತರ ಅದು ಯಾರ ಪಾಲಾಗುತ್ತದೆ ಎಂಬುದು ಗೊತ್ತಿಲ್ಲ. ಹಾಗಾಗಿ ನಾವು ಒಂದು ರೂಪಾಯಿ ಸಂಪಾದಿಸಿದರೂ ಅದರ ಒಂದು ಪಾಲು ಸಮಾಜಕ್ಕೆ ಹೋಗಬೇಕು ಎನ್ನುವುದು ನನ್ನ ನಿಲುವು. ನಮ್ಮ ಈ ಯೋಜನೆಯ ಹಿಂದೆಯೂ ಅದೇ ದೃಷ್ಟಿಕೋನವಿದೆ. ಹಾಗಾಗಿ ಈ ಕೆಲಸದಲ್ಲಿ ನನಗೆ ಸಂತೋಷ, ತೃಪ್ತಿ ಎರಡೂ ಸಿಕ್ಕಿದೆ.

—ಡಾ. ಕಾಮಿನಿ ರಾವ್